**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ:428: ಉಖಾಯೋ: 2013

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಬಹುಮಹಡಿ ಕಟ್ಟಡ, ಸಚಿವಾಲಯ-2,
ಬೆಂಗಳೂರು, ದಿನಾಂಕ:10-09-2013.

## ಸುತ್ತೋಲೆ

**ವಿಷಯ:** ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆಯುಕ್ತಾಲಯದಿಂದ ಹೊರಡಿಸುವ ಆದೇಶ/ಸುತ್ತೋಲೆ/ಪತ್ರಗಳನ್ನು ಇಲಾಖೆ ಅಂತರ್ಜಾಲ www.end2endnrega.in ಹಾಗೂ www.rdpr.kar.nic.in ದಲ್ಲಿ ಪ್ರಚಾರ ಪಡಿಸುವ ಕುರಿತು.

******

ಆಯುಕ್ತಾಲಯದಿಂದ ಈ ಯೋಜನೆಯನ್ನು ಅನುಷ್ಠಾನಿಸುವ ನಿಟ್ಟಿನಲ್ಲಿ ಹಲವಾರು ಸರ್ಕಾರದ ಆದೇಶ/ಸುತ್ತೋಲೆ/ಮಾರ್ಗಸೂಚಿಗಳು/ಎಸ್.ಎಂ.ಎಸ್/ಇ-ಮೇಲ್ ಮುಖಾಂತರ ಪತ್ರಗಳನ್ನು ಹೊರಡಿಸಲಾಗುತ್ತದೆ. ಈ ಎಲ್ಲಾ ಪತ್ರ ವ್ಯವಹಾರಗಳು ಅನುಷ್ಠಾನದ ಮೂಲ ಹಂತವಾದ ಗ್ರಾಮ ಪಂಚಾಯಿತಿಗಳಿಗೆ ತಲುಪುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಹಾಗಾಗಿ ರಾಜ್ಯ ಸರ್ಕಾರವು ನೀಡಿದ ಸೂಚನೆಗಳನ್ನು ಪರಿಪೂರ್ಣವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲದಿರುವುದನ್ನು ಗಮನಿಸಲಾಗಿದೆ.

ಆದ್ದರಿಂದ ಈ ಯೋಜನೆ ಕಾರ್ಯಕ್ರಮಗಳ ಸಂಬಂಧದಲ್ಲಿ ಸರ್ಕಾರದ ಆದೇಶ/ಸುತ್ತೋಲೆ ಹಾಗೂ ನಡೆಸಿದ ಪತ್ರವ್ಯವಹಾರಗಳನ್ನು ಈ ಕೆಳಗಿನ ಎರಡು ಅಂತರ್‌ಜಾಲ ತಾಣಗಳಲ್ಲಿ ತಪ್ಪದೇ ಪ್ರಕಟಿಸುವುದು. ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು/ಸಿಬ್ಬಂಧಿಯವರು ಜವಾಬ್ದಾರರಾಗಿರುತ್ತಾರೆ.

1) www.end2endnrega.in
2) www.rdpr.kar.nic.in

ಈ ಕುರಿತು ಕೈಗೊಂಡ ಕ್ರಮದ ವರದಿಯನ್ನು ತಮ್ಮ ಶಾಖೆಯ ಮುಖ್ಯಸ್ಥರ ಮೂಲಕ ಕಾಲ ಕಾಲಕ್ಕೆ ಮುಖ್ಯ ಕಾರ್ಯಚರಣೆ ಅಧಿಕಾರಿಗಳು ಹಾಗೂ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.

10/9/13

ಆಯುಕ್ತರು
ಗ್ರಾಮೀಣಾಭಿವೃದ್ಧಿ

ಗೆ,

1. ಮುಖ್ಯಸ್ಥರು, (ಹಣಕಾಸು ಮತ್ತು ಲೆಕ್ಕಪತ್ರ), ಎಂ.ಜಿ.ಎನ್.ಆರ್.ಇ.ಜಿ.ಎಸ್ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2. ಜಂಟಿ ನಿರ್ದೇಶಕರು-1 ಮತ್ತು 2 ಎಂ.ಜಿ.ಎನ್.ಆರ್.ಇ.ಜಿ.ಎಸ್ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಸಹಾಯಕ ನಿರ್ದೇಶಕರು-1,2,3,4 ಎಂ.ಜಿ.ಎನ್.ಆರ್.ಇ.ಜಿ.ಎಸ್ ಶಾಖೆ, ಗ್ರಾಅ&ಪಂ.ರಾಜ್ ಇಲಾಖೆ.
4. ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂಧಿ ವರ್ಗದವರು.
5. ಮೆ:ಇಫಿಯಾ (M/S Effia) ಇವರಿಗೆ ಆಯುಕ್ತಾಲಯದಿಂದ ಬರುವ ಎಲ್ಲಾ ದಾಖಲೆ ಪತ್ರಗಳನ್ನು ತಮ್ಮ ವೆಬ್‌ಸೈಟ್‌ನಲ್ಲಿ ಅಳವಡಿಸುವುದು.
6. ಶ್ರೀನಿವಾಸ್ ಇವರ ಗಣಕ ಕೋಶ ಇವರ ಮಾಹಿತಿಗಾಗಿ.

ಪ್ರತಿ

1. ಆಯುಕ್ತರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಆಪ್ತ ಸಹಾಯಕರಿಗೆ.
2. ಮುಖ್ಯ ಕಾರ್ಯಚರಣೆ ಅಧಿಕಾರಿ (ಮ.ಗಾ.ರಾ.ಗ್ರಾ.ಉ.ಖಾ.ಯೋ) ರವರ ಆಪ್ತ ಸಹಾಯಕರು ಗ್ರಾ.ಅ.&ಪಂ.ರಾಜ್ ಇಲಾಖೆ.
3. ಮಾನ್ಯ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳಿಗೆ, ಗ್ರಾ.ಅ.&ಪಂ.ರಾಜ್ ಇಲಾಖೆ.
4. ಶ್ರೀ ವೈ. ಮಹಾಂಕಾಳಪ್ಪ, ಸಾರ್ವಜನಿಕ ಸಂಪರ್ಕಾಧಿಕಾರಿ, ಗ್ರಾ.ಅ&ಪಂ.ರಾಜ್ ಇಲಾಖೆ ಇವರ ಮಾಹಿತಿಗಾಗಿ.